ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1593
ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ
ಉತ್ತರಿಸುವ ದಿನಾಂಕ : 11-03-2022
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯಾದ್ಯಂತ ಕೆ.ಆರ್.ಇ.ಐ.ಎಸ್. ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಿಜ್ಞಾನ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು;	ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 26 (12-ಪರಿಶಿಷ್ಟ ಜಾತಿ, 02-ಪರಿಶಿಷ್ಟ ವರ್ಗ, 12-ಹಿಂದುಳಿದ ವರ್ಗಗಳ ಪದವಿ ಪೂರ್ವ ಕಾಲೇಜುಗಳು) ಹಾಗೂ 31 ಮೊರಾರ್ಜಿ/ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳನ್ನು ಉನ್ನತೀಕರಿಸಿದ, 12 ಏಕಲವ್ಯ ವಸತಿ ಶಾಲೆ, 10 ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು ಸೇರಿದಂತೆ ಒಟ್ಟು 79 ವಸತಿ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.
ಆ)	ಸದರಿ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳು ಎಷ್ಟು; (ವಿಷಯವಾರು ವಿವರ ಒದಗಿಸುವುದು)	ಸಂಘದ ವಸತಿ ಕಾಲೇಜು/ ಉನ್ನತೀಕರಿಸಿದ ಕಾಲೇಜುಗಳಿಗೆ ಮಂಜೂರಾಗಿರುವ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿ ಇರುವ ಹುದ್ದೆಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ.
ಇ)	ಖಾಲಿ ಇರುವ ಉಪನ್ಯಾಸಕರ ಹುದ್ದೆಗಳ ಭರ್ತಿಗೆ ತೆಗೆದುಕೊಂಡ ಕ್ರಮಗಳಾವುವು;	ಸಂಘದ ಅಧೀನದಲ್ಲಿನ ಉನ್ನತೀಕರಿಸಲಾಗಿರುವ 30 ವಸತಿ ಪದವಿ ಪೂರ್ವ ತರಗತಿಗಳಿಗೆ ಖಾಯಂ ಉಪನ್ಯಾಸಕರ ಹುದ್ದೆಗಳನ್ನು ಮಂಜೂರು ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಹುದ್ದೆಗಳನ್ನು ಮಂಜೂರು ಮಾಡಿದ ನಂತರ ನಿಯಮಾನುಸಾರ ಖಾಯಂ ಬೋಧಕ ಸಿಬ್ಬಂದಿಗಳನ್ನು ನೇಮಕ ಮಾಡಲು ಕ್ರಮವಹಿಸಲಾಗುವುದು.
ಈ)	ಈಗಾಗಲೇ ಮೊರಾರ್ಜಿ ದೇಸಯಿ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಸಹ ಶಿಕ್ಷಕರುಗಳಿಗೆ ಉಪನ್ಯಾಸಕರ ಹುದ್ದೆಗೆ ಯಾವಾಗ ಬಡ್ತಿ ನೀಡಲಾಗಿದೆಯೇ;	ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗಳು-2021 ರನ್ವಯ ವಸತಿ ಶಾಲೆಗಳ ಸಹ ಶಿಕ್ಷಕರಿಗೆ ಉಪನ್ಯಾಸಕರ ಹುದ್ದೆಗೆ ಮುಂಬಡ್ತಿ ನೀಡಲು ಅವಕಾಶ ಕಲ್ಪಿಸಲಾಗಿದ್ದು, ಈ ಸಂಬಂಧ ಕ್ರಮಹಿಸಲಾಗುತ್ತಿದೆ.
ಉ)	ನೀಡದಿದ್ದಲ್ಲಿ, ಶೈಕ್ಷಣಿಕ ಹಿತದೃಷ್ಟಿಯಿಂದ ಯಾವ ಕಾಲಮಿತಿಯಲ್ಲಿ ಸಹ ಶಿಕ್ಷಕರುಗಳಿಗೆ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡಲಾಗುವುದು? (ವಿವರವಾದ ಮಾಹಿತಿ ಒದಗಿಸುವುದು)	

ಸಕಇ 152 ಮೊದೇಶಾ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1593ಕ್ಕೆ ಅನುಬಂಧ-1

ಬೋಧಕ ಸಿಬ್ಬಂದಿಗಳ ವಿವರಗಳು

ಕ್ರಸಂ	ಹುದ್ದೆ	ಮಂಜೂರಾಗಿರುವ ಹುದ್ದೆಗಳು	ಖಾಯಂ ಸಿಬ್ಬಂದಿಗಳ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
1	ಪದವಿ ಪೂರ್ವ ವಸತಿ ಕಾಲೇಜುಗಳ ಪ್ರಾಂಶುಪಾಲರು	26	25	1
2	ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ಪ್ರಾಂಶುಪಾಲರು	10	0	10
3	ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ಉಪ ಪ್ರಾಂಶುಪಾಲರು	10	0	10
4	ಪ್ರಾಂಶುಪಾಲರು	43	24	18
5	ಕನ್ನಡ ಭಾಷಾ ಶಿಕ್ಷಕರು	61	41	20
6	ಆಂಗ್ಲ ಭಾಷಾ ಶಿಕ್ಷಕರು	61	32	29
7	ಹಿಂದಿ ಭಾಷಾ ಶಿಕ್ಷಕರು	61	29	32
8	ಗಣಿತ ಶಿಕ್ಷಕರು	61	36	25
9	ವಿಜ್ಞಾನ ಶಿಕ್ಷಕರು	81	41	40
10	ಸಮಾಜ ವಿಜ್ಞಾನ ಶಿಕ್ಷಕರು	61	30	31
11	ಕಂಪ್ಯೂಟರ್ ಶಿಕ್ಷಕರು	61	38	23
12	ದೈಹಿಕ ಶಿಕ್ಷಣ ಶಿಕ್ಷಕರು	61	31	30
13	ಡ್ರಾಯಿಂಗ್ ಶಿಕ್ಷಕರು	61	0	61
14	ಸಂಗೀತ ಶಿಕ್ಷಕರು	51	20	31
15	ಕನ್ನಡ ಭಾಷಾ ಉಪನ್ಯಾಸಕರು	26	21	5
16	ಆಂಗ್ಲ ಭಾಷಾ ಉಪನ್ಯಾಸಕರು	26	20	6
17	ಭೌತಶಾಸ್ತ್ರ ಉಪನ್ಯಾಸಕರು	26	23	3
18	ಗಣಿತ ಉಪನ್ಯಾಸಕರು	26	21	5
19	ರಸಾಯನಶಾಸ್ತ್ರ ಉಪನ್ಯಾಸಕರು	26	20	6
20	ಜೀವಶಾಸ್ತ್ರ ಉಪನ್ಯಾಸಕರು	26	23	3
21	ಗಣಿತ ವಿಜ್ಞಾನ ಉಪನ್ಯಾಸಕರು	26	21	5
ಒಟ್ಟು (ಅ)		891	496	394